**ಪಿ ಆಂಡ್ ಎಸ್ ಸಿ. ನಂ. 10/2017**

**ಆರ್ ಡಬ್ಲ್ಯೂ.- 1**

**ಸಾಕ್ಷಿಯು ದಿನಾಂಕಃ 11-02-2026 ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ಪಾಟೀ ಸವಾಲು ಅರ್ಜಿದಾರರ ಪರ ಶ್ರೀ ಎಂ.ಕೆ ವಕೀಲರಿಂದಃ</u>**

ನನ್ನ ತಕರಾರಿನಲ್ಲಿ ಜಿ.ಕಣ್ಣನ್‌ರವರು ಟಿ.ಬಿ ಬೋರ್ಡ್‌ನಲ್ಲಿ ಪಂಪ್ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದರು ಎಂದು ಬರೆಸಿರುತ್ತೇನೆ ಅಂದರೆ ಸರಿ. ದಿಃ 30-11-2016 ರಂದು ಜಿ.ಕಣ್ಣನ್ ರವರು ಮೃತಪಟ್ಟಿರುತ್ತಾರೆ. ಸದರಿಯವರು ಹೊಸಪೇಟೆಯ 100 ಹಾಸಿಗೆ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದರು. ಅವರು ಕ್ಯಾನ್ಸರ್ ಖಾಯಿಲೆಯಿಂದ ಬಳಲಿ ಮೃತಪಟ್ಟಿರುತ್ತಾರೆ.

ಜಿ.ಕಣ್ಣನ್ ರವರ ಮರಣಾ ನಂತರ ಅರ್ಜಿದಾರರು 3 ರಿಂದ 6 ನೇ ಎದುರುದಾರರಿಗೆ ಸವಲತ್ತುಗಳನ್ನು ಮತ್ತು ಕೆಲಸವನ್ನು ತಮಗೆ ನೀಡುವಂತೆ ಅರ್ಜಿ ಸಲ್ಲಿಸಿದ್ದರು ಅಂದರೆ ಸರಿಯಲ್ಲ. ಸದರಿಯರು ಅರ್ಜಿಯೊಂದಿಗೆ ತಾವು ಜಿ. ಕಣ್ಣನ್ ನ ಹೆಂಡತಿ ಮತ್ತು ಮಕ್ಕಳು ಎಂದು ತೋರಿಸಲು ದಾಖಲೆಗಳನ್ನು ಸಹ ಹಾಜರುಪಡಿಸಿದ್ದರು ಅಂದರೆ ಸರಿಯಲ್ಲ. ಸದರಿಯವರು ಅರ್ಜಿ ನೀಡಿರುವ ವಿಚಾರ ತಿಳಿದು ನಾನು ಮತ್ತು ನನ್ನ ತಾಯಿ ನಂತರದಲ್ಲಿ ಹೋಗಿ ನಮಗೂ ಸವಲತ್ತುಗಳು ಮತ್ತು ಕೆಲಸ ಬೇಕು ಎಂದು ಅರ್ಜಿ ಸಲ್ಲಿಸಿದ್ದೇವು ಅಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವೇ ಮೊದಲು ಅರ್ಜಿ ಸಲ್ಲಿಸಿದ್ದೇವು ಎಂದು ನುಡಿಯುತ್ತಾರೆ. ಟಿ. ಬಿ. ಬೋರ್ಡ್ ನವರು ನಮಗೆ ಸವಲತ್ತುಗಳನ್ನು ಕೊಡುವುದಾಗಿ ಹೇಳಿದ್ದರು. ಆ ರೀತಿ 2017 ರಲ್ಲಿ ಹೇಳಿದ್ದರು. ಟಿ. ಬಿ ಬೋರ್ಡ್ ನವರು ನಮಗೆ ಸವಲತ್ತುಗಳನ್ನು ನೀಡಿರುವುದಿಲ್ಲ. ಪ್ರಕರಣ ಬಾಕಿ ಇರುವುದರಿಂದ ಸವಲತ್ತುಗಳನ್ನು ನೀಡಿರುವುದಿಲ್ಲ. ನಮಗೆ ಆಗಲೇ ಈ ಪ್ರಕರಣದ ಬಗ್ಗೆ

ಗೊತ್ತಾಗಿದ್ದು ಅಂದರೆ ಸರಿ. ಸಾಕ್ಷಿ ಮುಂದುವರೆದು ನಂತರ ನೋಟಿಸ್ ಸಹ ಬಂದಿದ್ದವು ಎಂದು ನುಡಿಯುತ್ತಾರೆ.

ನಾವುಗಳು ಸದರಿ ವಿಚಾರ ಗೊತ್ತಾದ ನಂತರ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ ನಾವೇ ವಾರಸುದಾರರು ಎಂದು ಪ್ರಮಾಣ ಪತ್ರ ಪಡೆದಿರುತ್ತೇವೆ ಅಂದರೆ ಸರಿ. ಸದರಿ ಪ್ರಕರಣದಲ್ಲಿ ಈ ಪ್ರಕರಣದ ಅರ್ಜಿದಾರರನ್ನು ಪಕ್ಷಗಾರರನ್ನಾಗಿ ಮಾಡಿರಲಿಲ್ಲ. ನನ್ನ ತಾಯಿ ಕಣ್ಣನ್ ರವರ ಸ್ವಂತ ಅಕ್ಕನ ಮಗಳು ಅಂದರೆ ಸರಿ. ಆ ಕಾರಣದಿಂದಲೇ ನನ್ನ ತಾಯಿ ತಾವೇ ಕಣ್ಣನ್ ರವರ ಹೆಂಡತಿಯೆಂದು ಟಿ.ಬಿ ಬೋರ್ಡ್‌ನಲ್ಲಿ ತಮ್ಮ ಹೆಸರನ್ನು ನಮೂದಿಸಿರುತ್ತಾರೆ ಅಂದರೆ ಸರಿಯಲ್ಲ. ನನ್ನ ತಾಯಿ ಮತ್ತು ಕಣ್ಣನ್ ಆಗಿನಿಂದಲೂ ಜೊತೆಗೆ ಇದ್ದು ಸಂಸಾರ ಮಾಡಿಲ್ಲ ಅಂದರೆ ಸರಿಯಲ್ಲ. ನನ್ನ ತಾಯಿ ಯಾವಾಗಲೂ ಕಣ್ಣನ್‌ರವರೊಂದಿಗೆ ಜಗಳ ಮಾಡುತ್ತಿದ್ದರು ಅಂದರೆ ಸರಿಯಲ್ಲ. ಕಣ್ಣನ್ ರವರು 1 ನೇ ಅರ್ಜಿದಾರರನ್ನು ಆಗಲೇ ಮದುವೆಯಾಗಿ ಸದರಿ ವಿಚಾರವನ್ನು ನನ್ನ ತಾಯಿಗೆ ತಿಳಿಸದಿದ್ದ ಕಾರಣ ಆ ರೀತಿ ನನ್ನ ತಾಯಿ ಜಗಳ ಮಾಡುತ್ತಿದ್ದರು ಅಂದರೆ ಸರಿಯಲ್ಲ. ಕಣ್ಣನ್ ರವರು 1 ನೇ ಅರ್ಜಿದಾರಳೆ ತಮ್ಮ ಹೆಂಡತಿಯೆಂದು ಮತ್ತು ನನ್ನ ತಾಯಿ ಆತನ ಹೆಂಡತಿಯಲ್ಲ ಎಂದು ನಮಗೆ ಹೇಳುತ್ತಿದ್ದರು ಅಂದರೆ ಸರಿಯಲ್ಲ.

ನನ್ನ ತಾಯಿ ಜೀವನಾಂಶ ಕೋರಿ ಕಣ್ಣನ್‌ರವರ ವಿರುದ್ಧ ಅರ್ಜಿ ಸಲ್ಲಿಸಿದ್ದರು ಅಂದರೆ ಸರಿಯಲ್ಲ. ಸದರಿ ಅರ್ಜಿ ಪುರಸ್ಕೃತಗೊಂಡು ಆದೇಶದ ಆಧಾರದ ಮೇಲೆ ವಸೂಲಿಯನ್ನು ಸಹ ಮಾಡಿರುತ್ತೇವೆ ಅಂದರೆ ಸರಿಯಲ್ಲ. ಅರ್ಜಿದಾರರು ಕಣ್ಣನ್ ರವರ ಹೆಂಡತಿ ಮಕ್ಕಳು ಎಂದು ಗೊತ್ತಿರುವುದರಿಂದ ಸದರಿಯವರಿಗೆ ತೊಂದರೆ ನೀಡುವ ಉದ್ದೇಶದಿಂದ ವಿನಾಕಾರಣ ಅವರ ವಿರುದ್ಧ ಠಾಣೆಯಲ್ಲಿ ದೂರು ನೀಡುವುದು ಮತ್ತು ಪ್ರಕರಣ ದಾಖಲಿಸುವುದು ಮಾಡಿರುತ್ತೇವೆ

ಅಂದರೆ ಸರಿಯಲ್ಲ. ನಾನು ನೀಡಿದ ದೂರು ಸುಳ್ಳಿನಿಂದ ಕೂಡಿರುತ್ತದೆ ಎಂದು ಎಫ್.ಐ.ಆರ್ ಆಗಿರಲಿಲ್ಲ ಅಂದರೆ ಸರಿಯಲ್ಲ. ನಂತರ ಸುಳ್ಳು ಮಾಹಿತಿ ನೀಡಿ ಖಾಸಗಿ ಪಿರ್ಯಾದು ಸಲ್ಲಿಸಿದ್ದೆ ಅಂದರೆ ಸರಿಯಲ್ಲ. ಖಾಸಗಿ ಪಿರ್ಯಾದು ನೀಡಿದ್ದ ಪ್ರಕರಣ ವಜಾ ಆಗಿರುತ್ತದೆ ಅಂದರೆ ಸರಿಯಲ್ಲ.

ನಾನು ಎಸ್.ಎಸ್.ಎಲ್.ಸಿ ವರೆಗೆ ಒದಿರುತ್ತೇನೆ. ನಾನು ಸೆಂಟ್ ಜಾನ್ಸ್ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆದಿರುತ್ತೇನೆ. ಸದರಿ ಶಾಲೆಯ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಯಲ್ಲಿ ನನ್ನ ತಂದೆಯ ಹೆಸರು ಕಣ್ಣನ್ ಎಂದು ಇರುತ್ತದೆ.

ನನಗೆ ಮದುವೆ ಆಗಿರುತ್ತದೆ. ನಾನು ಈಗ ಬಳ್ಳಾರಿಯಲ್ಲಿ ವಾಸವಿರುತ್ತೇನೆ. ಕಣ್ಣನ್ ರವರು ಹುಬ್ಬಳ್ಳಿಯಲ್ಲಿ ಕ್ಯಾನ್ಸರ್ ಖಾಯಿಲೆಗೆ ಚಿಕಿತ್ಸೆ ಪಡೆದಿದ್ದರು. ಅವರನ್ನು ನೋಡಿಕೊಳ್ಳಲು ನನ್ನ ತಾಯಿ ಆಸ್ಪತ್ರೆಯಲ್ಲಿ ಇದ್ದರು. ಕಣ್ಣನ್ ರವರು ಹುಬ್ಬಳ್ಳಿಯಲ್ಲಿ ಚಿಕಿತ್ಸೆ ಪಡೆದಾಗ 1 ನೇ ಅರ್ಜಿದಾರಳು ಅವರೊಂದಿಗೆ ಇದ್ದರು ಅಂದರೆ ಸರಿಯಲ್ಲ. ಅರ್ಜಿದಾರರು ಕಣ್ಣನ್ ರವರ ಮರಣಾನಂತರ ಸವಲತ್ತು ಗಳನ್ನು ಪಡೆದುಲು ಅರ್ಹರಿದ್ದರೂ ವಿನಾಕಾರಣ ತಕರಾರು ಸಲ್ಲಿಸಿ, ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಶಾಲಾ ದಾಖಲಾತಿಗಳಲ್ಲಿ ತಂದೆ ಹೆಸರು ಕಣ್ಣನ್ ಎಂದು ಇರುವುದಿಲ್ಲ ಅಂದರೆ ಸರಿಯಲ್ಲ. ನಾನು ಕಣ್ಣನ್ ರವರ ಕುಟುಂಬಕ್ಕೆ ಸಂಬಂಧ ಪಟ್ಟವಳಲ್ಲ ಅಂದರೆ ಸರಿಯಲ್ಲ. ಅರ್ಜಿದಾರರೇ ಕಣ್ಣನ್ ರವರ ಕಾನೂನು ಬದ್ದ ವಾರಸುದಾರರು ಅಂದರೆ ಸರಿಯಲ್ಲ. ನಾನು ಕಣ್ಣನ್ ಮತ್ತು 1 ನೇ ಎದುರುದಾರರಿಗೆ ಒಟ್ಟಾಗಿ ತೆಗೆಸಿಕೊಂಡ ಫೋಟೋ ಹಾಜರು ಪಡಿಸಿರುತ್ತೇನೆ. ನಾನು ಸಲ್ಲಿಸಿರುವ ದಾಖಲೆಗಳೆಲ್ಲಾ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತೇವೆ ಅಂದರೆ ಸರಿಯಲ್ಲ. ಕಣ್ಣನ್‌ರವರ ಮರಣೋತ್ತರವಾಗಿ ಬರುವ ಯಾವುದೇ ಸವಲತ್ತುಗಳನ್ನು ಪಡೆಯಲು ನನಗೆ ಅರ್ಹತೆ ಇರುವುದಿಲ್ಲ ಅಂದರೆ ಸರಿಯಲ್ಲ.

ಕಣ್ಣನ್ ರವರು ಮೃತಪಟ್ಟಾಗ ಅಂತ್ಯಕ್ರಿಯೆಗೆ ಟಿ.ಬಿ ಬೋರ್ಡ್ ನಿಂದ ನೀಡುವ ಹಣವನ್ನು 1 ನೇ ಅರ್ಜಿದಾರಳಿಗೆ ಕೊಟ್ಟಿರುತ್ತಾರೆ ಅಂದರೆ ಸರಿಯಲ್ಲ. ನಾನು ಕಣ್ಣನ್ ರವರ ಮಗಳು ಅಲ್ಲದ ಕಾರಣವೇ ಸೇವಾ ಪುಸ್ತಕದಲ್ಲಿ ನನ್ನ ಹೆಸರು ಇಲ್ಲ ಅಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.